ಓ. ಎಸ್. ನಂಃ 102/2007

ಡಿ . ಡಬ್ಲ್ಯೂಃ 1

ದಿಃ10-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಹೆಚ್ಚುವರಿ ವಿವಾದಾಂಶದ ಮೇಲೆ ಪಾಟೀ ಸವಾಲುಃ ಶ್ರೀ ಕೆ ಎಸ್ ಜೆ ವಾದಿ ಪರ ವಕೀಲರಿಂದ ಃ</u>

ನಾನು ಬೂಪಾಲಪ್ಪ ಅವರನ್ನು 1997 ರಲ್ಲಿ ಮದುವೆ ಆದ ನಂತರ ಖಾತೆ ಬದಲಾವಣೆ ಬಗ್ಗೆ ಅರ್ಜಿ ಕೊಟ್ಟಿಲ್ಲ . ನಾನು ಹೆಂಡತಿ ಎಂದು ದಾಖಲಾತಿಗಳು ಯಾವಾಗ ಬದಲಾವಣೆ ಆಗಿದೆ ಎಂದರೆ ಗೊತ್ತಿಲ್ಲ . ನನ್ನ ಮದುವೆ ಕಾಲಕ್ಕೆ ಬೂಪಾಲಪ್ಪ ಅವರ ಅಣ್ಣ ತಮ್ಮ ಅಕ್ಕ ತಂಗಿ ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ಮದುವೆಯಲ್ಲಿ ನೇಮಣ್ಣವರ ಮನೆತನದವರು ಯಾರು ಇದ್ದರು ಎಂದು ನನಗೆ ನೆನಪಿಲ್ಲ . ನನ್ನ ಅಣ್ಣ ಪಾಯಪ್ಪ ಜೈನ , ಎಕರಾಜ ಜೈನ , ಬರಮಗೌಡ ಪಾಟೀಲ ಹೊಸುರಿನವರು , ಈರಪ್ಪ ಅಂಗಡಿ , ಈರಪ್ಪ ಹುಣಸಿಕಟ್ಟಿ , ಬಸಪ್ಪ ಅಂಗಡಿ ಹುನುಗಂದದವರು ಇವರೆಲ್ಲಾ ನನ್ನ ಮದುವೆಯ ಪೊಟೊದಲ್ಲಿ ಇದ್ದಾರೆ ಎಂದರೆ ಗೊತ್ತಿಲ್ಲ . ಮೇಲೆ ಹೇಳಿದ ಹೆಸರುಗಳು ಲಗ್ನ ಪತ್ರ ನೋಡಿದ ನಂತರ ತಿಳಿದಿದೆ . ಲಗ್ನ ಪತ್ರವನ್ನು ಬೂಪಾಲಪ್ಪ ಅವರ ಕಡೆಯವರು ಪ್ರಿಂಟ ಮಾಡಿಸಿದ್ದಾರೆ . ಮೇಲೆ ಹೇಳಿದವರನ್ನು ಒ ಎಸ ನಂಬರ 32/2007 ರಲ್ಲಿ ಸಾಕ್ಷಿದಾರರಾಗಿ ಮಾಡಿಸಿಲ್ಲ . ಭೂಪಾಲಪ್ಪನ ಅಣ್ಣತಮ್ಮಂದಿರ ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿ. ನನ್ನ ಮದುವೆಗೆ ಬಂದವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿ. ಪದ್ಮರಾಜ ಬಸವಂತಪ್ಪ ಅವರನ್ನು ಈ ಪ್ರಕರಣದಲ್ಲಿ ಸಾಕ್ಷಿ ಮಾಡಿಸಿದ್ದೀರಾ ಎಂದರೆ ಇಲ್ಲ. ನಾನು ನ್ಯಾಯಾಲಯದಿಂದ ಬೂಪಾಲಪ್ಪನವರ succession certificate ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಎಲ್ಲಾ ಸಾಕ್ಷಿ ಆದಾರಗಳು ಹಾಗೂ ಉಚ್ಚ ನ್ಯಾಯಾಲಯದಲ್ಲಿ ಆದ ಆದೇಶವನ್ನು ಸಹ ಹಾಜರುಪಡಿಸಿದ್ದೇನೆ . ಮಾನ್ಯ ಉಚ್ಚ ನ್ಯಾಯಾಲಯದಲ್ಲಿ succession certificate ಇಲ್ಲದೇ ನಿರ್ಣಯ ಮಾಡಲು ಆಗುವುದಿಲ್ಲ ಎಂದು ಆದೇಶ ಆಗಿದೆ ಎಂದರೆ ಸರಿಯಲ್ಲ . ಬೂಪಾಲಪ್ಪ ಅವರಿಗೆ ಮೊದಲೇ ವಾದಿ ಹೆಂಡತಿ ಇದ್ದರೂ ಎಂದರೆ ನನಗೆ ಗೊತ್ತಿಲ್ಲ ನನ್ನ ಗಂಡ ಸತ್ತ ಮೇಲೆ ಬಂದಿದ್ದಾರೆ .

ವಾರಸಾ ಸರ್ಟಿಫಿಕೇಟ ಪಡೆಯುವಾಗ ಸಾರ್ವಜನಿಕ ದಿನ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದೆನೆ . ಒ ಎಸ 32/2007 ಯಲ್ಲಿ ಡಿಕ್ರಿ ಪಡೆದ ನಂತರ ಖಾತೆ ಬದಲಾವಣೆ ಮಾಡಲು ಕೊಟ್ಟಿದ್ದೆನೆ ಎಂದರೆ ಸಾಕ್ಷಿಯು ಅದಕ್ಕು ಮೊದಲೇ ಬದಲಾವಣೆ ಮಾಡಲು ಕೊಟ್ಟಿದ್ದೆನೆ . ಒ ಎಸ್ 32/2007 ಡಿಕ್ರಿ ಪಡೆಯುವ ಮೊದಲು ಸರಕಾರಕ್ಕೆ ನಾನೇ ವಾರಸುದಾರಳು ಎಂದು ಅರ್ಜಿ ಕೊಟ್ಟಿಲ್ಲ . ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ನಾನೇ ಹೆಂಡತಿ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.